ನೀಡುವ ಸಾಧ್ಯತೆಯೂ ಅವರ ನಡುವೆಯೇ ಹೆಚ್ಚಿರುತ್ತದೆ. ನಮ್ಮ ಮತ್ತು ಮಕ್ಕಳ ಬಾಂಧವ್ಯ ಎಷ್ಟೇ ಗಟ್ಟಿಯಾಗಿದ್ದರೂ ಅವರು ಎಲ್ಲವನ್ನೂ ನಮ್ಮ ಬಳಿ ಹಂಚಿಕೊಳ್ಳಲು ಸಾಧ್ಯವಿಲ್ಲ. ಈ ಕಾರಣಕ್ಕೆ ಇನ್ನೊಂದು ಮಗುವಿನ ಅಗತ್ಯ ಇರಬಹುದು ಎಂಬುದು ನನ್ನ ಅನಿಸಿಕೆ.

ಆದರೆ ನಿಮ್ಮ ವಿಷಯದಲ್ಲಿ ಇದು ನೀವಿಬ್ಬರೂ ಸೇರಿ ಜವಾಬ್ದಾರಿ ನಿಭಾಯಿಸುವ ನಿರ್ಧಾರ ತೆಗೆದುಕೊಂಡರೆ ಮಾತ್ರ ಸಾಧ್ಯವಾಗುತ್ತದೆ.

ನೀವು ಹೇಳುತ್ತಿರುವುದನ್ನು ಕೇಳುತ್ತಿದ್ದರೆ, ನಿಮ್ಮ ಗಂಡ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಳ್ಳುವುದಿಲ್ಲ. ಆದ್ದರಿಂದ ಈ ಬಗ್ಗೆ ನೀವೇ ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಈ ಎಲ್ಲಾ ಮಾತುಗಳನ್ನು ನಿಮ್ಮ ಗಂಡನಿಗೆ ಸೂಕ್ಷ್ಮವಾಗಿ ಅರ್ಥ ಮಾಡಿಸಲು ಪ್ರಯತ್ನಿಸಿ. ನಿಮ್ಮ ಎರಡನೇ ಮಗುವಿನ ಬಯಕೆ ನಿಮ್ಮ ಜೀವನವನ್ನು ಕಷ್ಟಕ್ಕೆ ತಳ್ಳುವ ಆಯ್ಕೆ ಮಾತ್ರ ಆಗಬಾರದು ಎಂಬ ಎಚ್ಚರಿಕೆ ಇರಲಿ. ನಾನು ಅಂದುಕೊಂಡಿದ್ದಕ್ಕೆ ವಿರುದ್ಧವಾಗಿ ನಿಮ್ಮ ಮೊದಲ ಮಗುವಿಗೆ ಒಡಹುಟ್ಟಿದವರೊಬ್ಬರು ಬೇಕಾಗದೆಯೂ ಇರಬಹುದು. ಎಲ್ಲಾ ಊಹೆಗಳನ್ನು ಬಿಟ್ಟು ವಾಸ್ತವದ ಆಧಾರದ ಮೇಲೆ ನಿರ್ಧಾರ ಮಾಡಿ.''

## ನಿರ್ಧಾರ ಯಾರದ್ದು?

ಮಕ್ಕಳನ್ನು ಯಾವಾಗ ಮಾಡಿಕೊಳ್ಳಬೇಕು, ಎಷ್ಟು ಮಕ್ಕಳಾಗಬೇಕು ಎಂಬ ನಿರ್ಧಾರವನ್ನು ಬಹಳಷ್ಟು ಸಲ ಕುಟುಂಬದಲ್ಲಿ ಹಿರಿಯರೇ ತೆಗೆದುಕೊಳ್ಳುತ್ತಾರೆ. ಕೆಲವು ಕುಟುಂಬಗಳಲ್ಲಿ ಗಂಡ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುವುದೂ ಇರುತ್ತದೆ. ಆದರೆ ಇಂದಿನ ಸಾಮಾಜಿಕ ಮತ್ತು ಕೌಟುಂಬಿಕ ಸಂರಚನೆಯ ದೃಷ್ಟಿಯಿಂದ ಮತ್ತು ಒಟ್ಟಾರೆ ಕುಟುಂಬದ ಆರೋಗ್ಯದ ದೃಷ್ಟಿಯಿಂದ ನೋಡಿದರೂ – ಮಗು ಬೇಕೋ ಬೇಡವೋ, ಎಷ್ಟು ಮಕ್ಕಳು ಬೇಕು ಎಂಬ ವಿಷಯಗಳನ್ನೆಲ್ಲ ಗಂಡ–ಹೆಂಡತಿ ಇಬ್ಬರೂ ಚರ್ಚಿಸಿ, ಇಬ್ಬರೂ ಸಮಭಾಗೀದಾರರಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಸಲಹೆ, ನಿರ್ಧಾರ ಯಾರದ್ದೇ ಇರಬಹುದು, ಎಷ್ಟೇ ಇರಬಹುದು. ಕೊನೆಗೂ ಮಗುವನ್ನು ಒಡಲೊಳಗೆ ಹೊತ್ತು, ಹೆತ್ತು, ಪೋಷಿಸುವವಳು ಹೆಂಡತಿ. ಅವಳಿಗೆ ಬೆಂಬಲವಾಗಿ ನಿಂತು, ಮಗುವಿನ ಪೋಷಣೆಯ ಜವಾಬ್ದಾರಿ ಹೊರಬೇಕಾದವನು ಗಂಡು. ಹಾಗಾಗಿ ನಿರ್ಧಾರ ಇಬ್ಬರದ್ದೇ ಆಗಿರಬೇಕು ಎನ್ನುವುದರಲ್ಲಿ ಬೇರೆ ಮಾತಿಲ್ಲ.

ಶುಶ್ರೂಷಕಿಯಾಗಿ ಕೆಲಸ ಮಾಡುತ್ತಿರುವ ವಿನ್ನಿಟಾ ರೋಹನ್ ಅವರಿಗೆ ಎರಡನೇ ಸಲ ತಾಯಿಯಾದುದು ತುಸು ಹೊರೆ ಅನಿಸಿದೆ. ತಮ್ಮ ವೃತ್ತಿಬದುಕು ಮತ್ತು ವೈಯಕ್ತಿಕ ಆಸಕ್ತಿಯನ್ನೂ ತಾಯ್ತನದ ನೆಪದಲ್ಲಿ ತ್ಯಾಗ ಮಾಡಬೇಕಾಗಿದ್ದು ಅವರಿಗೆ ಖುಷಿಯ ಸಂಗತಿಯೇನೂ ಅಲ್ಲ.

‘ಎರಡನೇ ಮಗು ಹೊರೆ ಅಂತನಿಸಿದ್ದು ನಿಜ. ಹೆರು–ಹೊರು ಎನ್ನುತ್ತಾ ನನ್ನ ಸಮಯವನ್ನೇ ತಾಯ್ತನ ಕಿತ್ತುಕೊಂಡಿತು ಅನಿಸಿದ್ದಿದೆ. ಗಂಡ, ಮನೆಯವರು ಎಷ್ಟೇ ಸಹಾಯ ಮಾಡುತ್ತಾರೆ ಎಂದರೂ ಮಗುವಿನ ಶೈಶವಾವಸ್ಥೆಯ ಹೊಣೆ ತಾಯಂದಿರದ್ದೇ ಆಗಿರುತ್ತದೆ. ಉಳಿದವರಿಗೆ ಮಗುವೊಂದು ಮನರಂಜನೆ ಅಂತಾದರೆ, ತಾಯಿಗೆ ಅದೊಂದು ಜವಾಬ್ದಾರಿ. ನನ್ನ ಎಲ್ಲಾ ಸಮಯ, ಗಮನ ಬೇಡಿದ ಜವಾಬ್ದಾರಿ ಅದು. ನನ್ನ ವೃತ್ತಿ ಮತ್ತು ಇತರ ಆಸಕ್ತಿಗಳು ಆ ಸಮಯಕ್ಕೆ ಕಟ್ಟಿಹಾಕಬೇಕಾಗಿತ್ತು. ಎರಡು ಮಕ್ಕಳ ತಾಯ್ತನದಿಂದ ಹೊರಬಂದು ಮುಂಚಿನಂತೆ ಬದುಕು ಕಟ್ಟಿಕೊಳ್ಳಲು ಆಗಲಿಲ್ಲ. ಹೆಣ್ಣು ಮೊದಲೇ ಕಡಿಮೆ ಸಂಬಳಕ್ಕೆ ದುಡಿಯುವವಳು. ಇದರ ಜೊತೆಗೆ ಇಂದಿನ ಸ್ಪರ್ಧಾತ್ಮಕ ಸಂದರ್ಭದಲ್ಲಿ ವೃತ್ತಿಯಲ್ಲಿನ ದೊಡ್ಡ ಗ್ಯಾಪ್ ನನ್ನನ್ನು ಮತ್ತಷ್ಟು ಹಿಂದಕ್ಕೆ ತಳ್ಳಿದೆ’ ಎನ್ನುವ ವಿನ್ನಿಟಾ ಅವರ

